**ಕ್ರಿಮಿಸ್ ನಂಃ 13/2016**
**ಪಿಡಬ್ಲೂ-1**

**ಸಾಕ್ಷಿಯನ್ನು ದಿನಾಂಕಃ-26.03.2026 ರಂದು ಕರೆಸಲಾಯಿತು.**
**ಪ್ರಮಾಣ ವಚನ ಭೋದಿಸಲಾಯಿತು.**

**ವಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ**

1. ಎದುರುದಾರರು ಅಂದರೆ ಶಿವರಾಜೇಗೌಡ ನನ್ನ ಸೋದರ ಮಾವ ಎಂದರೆ ಸರಿ. ನನ್ನ ತಾಯಿ ಜಯಮ್ಮ ರವರನ್ನು ಮೇಲಪಟ್ಟಿಯ ಬಸವೇಗೌಡರಿಗೆ ಕೊಟ್ಟು ಮದುವೆ ಮಾಡಲಾಗಿತ್ತು ಎಂದರೆ ಸರಿ. ನಾವು ಸಣ್ಣ ವಯಸ್ಸಿ ನವರಾಗಿದ್ದಾಗಲೇ ಬಸವೇಗೌಡರು ತೀರಿಕೊಂಡಿರುತ್ತಾರೆಂದರೆ ಸರಿ. ನಾವು ಮೇಲಪಟ್ಟಿಯಿಂದ ನಂತರ ಬನ್ನಿಮುಕ್ಕೋಡ್ಲು ಗ್ರಾಮಕ್ಕೆ ಬಂದು ವಾಸ ಮಾಡಲು ಶುರು ಮಾಡಿದೆವು ಎಂದರೆ ಸರಿ. ನಾವು ಬನ್ನಿಮುಕ್ಕೋಡ್ಲು ಗ್ರಾಮಕ್ಕೆ ಬಂದು ವಾಸ ಮಾಡಿದ ನಂತರ ನಮ್ಮ ಸೋದರ ಮಾವಂದಿರೇ ನಮ್ಮೆಲ್ಲರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾವು ಬೇರೆ ವಾಸ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಮ್ಮ ತಾಯಿಗೆ ನಾವು ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ನನ್ನ ತಾಯಿ ಕೂಲಿ ಮಾಡುತ್ತಿದ್ದರು. ನನ್ನ ಚಿಕ್ಕಮ್ಮ ನಮ್ಮನ್ನು ಸಾಕುತ್ತಿದ್ದರು.

2. ನನ್ನ ಹಾಗೂ ಶಿವರಾಜೇಗೌಡರ ಮದುವೆ ಅವರ ಮನೆಯ ಬಳಿ ಆಗಿರುತ್ತದೆಂದರೆ ಸರಿ. ಮದುವೆ ಖರ್ಚು ವೆಚ್ಚ ಎಲ್ಲವನ್ನು ಶಿವರಾಜೇಗೌಡರೇ ಭರಿಸಿ ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿ. ನಾನು ಹಾಗೂ ನನ್ನ ಗಂಡ ಸುಮಾರು 17 ವರ್ಷಗಳ ಕಾಲ ಅನ್ಯೂನ್ಯವಾಗಿದ್ದೇವು.  ಆ ಸಮಯದಲ್ಲಿ ನನ್ನ ಗಂಡ ನನ್ನ ಹಾಗೂ ನನ್ನ ಮಕ್ಕಳು ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಗಂಡನಿಗೆ ಮದುವೆಯ ಸಮಯದಲ್ಲಿ ಚಿನ್ನದ ಸರ ಕೊಟ್ಟಿರುತ್ತೇವೆ ಆದರೆ ಅದು ಎಷ್ಟು ಗ್ರಾಂ ಎಂದು ನನಗೆ ಗೊತ್ತಿಲ್ಲ. ಉಂಗುರವನ್ನು ಸಹ ಕೊಟ್ಟಿದ್ದು ಅದು 9 ಗ್ರಾಂ ಇತ್ತು. ಈ ಚಿನ್ನದ ಸರ ಹಾಗೂ ಉಂಗುರಕ್ಕೆ ರಶೀದಿಗಳನ್ನು ಹಾಜರು ಪಡಿಸಿರುವುದಿಲ್ಲ. ಅದು ಎಲ್ಲಿ ತರಿಸಿರುತ್ತಾರೆಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ರಾಜೀ ಸಂಧಾನ ಆಗುವ ಸಾದ್ಯತೆ ಇರುವ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು.)**

**ಓ.ಹೇ.ಕೆ. ಸರಿ ಇದೆ**

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿರವರು. ಕನಕಪುರ**